ಸೆಲೆಬ್ರಿಟಿ

ಹನಿ

# ಪಿ.ಎಂ ಪಟ್ಟಕ್ಕೆ ಇಮ್ರಾನ್?

ಕ್ರಿಕೆಟ್ ತಂಡದ ನಾಯಕನಾಗಿದ್ದವನೊಬ್ಬ ಆ ದೇಶದ ಪ್ರಧಾನ ಮಂತ್ರಿ ಆಗಬಹುದೆ? – ಇದು ಈಗ ಪಾಕಿಸ್ತಾನದಲ್ಲಿ ಸಾಮಾನ್ಯ ಜನರು ಕೇಳುತ್ತಿರುವ ಪ್ರಶ್ನೆ. ಅಲ್ಲಿನ ಪ್ರಧಾನಮಂತ್ರಿ ನವಾಜ್ ಷರೀಫ್ ಭ್ರಷ್ಟಾಚಾರದ ಆರೋಪದಲ್ಲಿ ನ್ಯಾಯಾಲಯದಿಂದ ಪದಚ್ಯುತಿಗೆ ಅರ್ಹ ಎಂಬ ತೀರ್ಪಿಗೆ ಒಳಗಾಗಿ ತಮ್ಮ ಹುದ್ದೆಗೆ ರಾಜೀನಾಮೆ ಕೊಟ್ಟ ಬಳಿಕ, ಈ ಪ್ರಶ್ನೆ ಇನ್ನಷ್ಟು ಜೋರಾಗಿ ಕೇಳಿಬರುತ್ತಿದೆ. ನವಾಜ್ ಷರೀಫ್ ರಾಜೀನಾಮೆಗೆ ಕಾರಣವಾದ ಭ್ರಷ್ಟಾಚಾರದ ಪನಾಮಾ ಗೇಟ್ಸ್ ದಾಖಲೆಗಳನ್ನೂ ಕೋರ್ಟಿನ ಮುಂದೆ ಮಂಡಿಸಿದ್ದು ಇಮ್ರಾನ್ ಖಾನ್ ಅವರ ಪಾಕಿಸ್ತಾನ್ ತೆಹ್ರಿಖ್ ಎ ಇನ್ಸಾಫ್ (ಪಿಟಿಐ) ಪಕ್ಷವೇ. ಹಾಗಾಗಿ ನವಾಜ್ ಷರೀಫ್ ತೆರವು ಮಾಡಿದ ಪ್ರಧಾನಿ ಸ್ಥಾನಕ್ಕೆ ಇಮ್ರಾನ್ ಖಾನ್ ಬರಬಹುದೆ ಎನ್ನುವುದು ಸಹಜ ಕುತೂಹಲ. ಆದರೆ ಅದಾಗಬೇಕಿದ್ದರೆ ಇಮ್ರಾನ್ ಖಾನ್ ಮುಂದಿನ ವರ್ಷದ ಮಧ್ಯಭಾಗದ ವರೆಗೆ ಕಾಯಬೇಕು. ಆಗ ನಡೆಯುವ ಮಹಾಚುನಾವಣೆಯಲ್ಲಿ ಅವರ ಪಕ್ಷ ಬಹುಮತ ಗೆಲ್ಲಬೇಕು.

1992ರಲ್ಲಿ ಪಾಕಿಸ್ತಾನಕ್ಕೆ ಸಿಕ್ಕಿದ ಒಂದೇ ಒಂದು ಕ್ರಿಕೆಟ್ ವಿಶ್ವಕಪ್ ಅನ್ನು ಗೆದ್ದುಕೊಟ್ಟಾತ ಈ ಇಮ್ರಾನ್ ಖಾನ್. ತನ್ನ ಅಪಾಯಕಾರಿ ಔಟ್‌ಸ್ವಿಂಗ್ ಮತ್ತು ವೇಗದ ಬೌಲಿಂಗ್‌ನಿಂದ ಎದುರಾಳಿ ತಂಡದ ಬ್ಯಾಟುಗಾರರಿಗೆ ನಡುಕ ಹುಟ್ಟಿಸಿದ್ದ ಬೌಲರ್. ಜತೆಗೆ ತಂಡದ ನಾಯಕನಾಗಿ ಬುದ್ಧಿವಂತಿಕೆಯ ವ್ಯೂಹರಚನೆಗೂ ಹೆಸರುವಾಸಿ. ಹಾಗೆ ದೇಶಕ್ಕೆ ವಿಶ್ವಕಪ್ ತಂದುಕೊಟ್ಟ ಇಮ್ರಾನ್ ಖಾನ್‌ರನ್ನು ಆಗಲೂ ದೇಶದ ಪ್ರಧಾನಿಯಾಗಿದ್ದ ನವಾಝ್ ಷರೀಫ್, 'ನೀವು ನನ್ನ ಪಾಕಿಸ್ತಾನ ಪೀಪಲ್ಸ್ ಪಾರ್ಟಿ ಸೇರಿಕೊಳ್ಳಬಾರದೇಕೆ' ಎಂದು ಆಹ್ವಾನಿಸಿದ್ದರಂತೆ. ಆದರೆ ಇಮ್ರಾನ್ ಖಾನ್ ಅದನ್ನು ನಿರಾಕರಿಸಿದ್ದರು.

ಕ್ರಿಕೆಟ್‌ನಲ್ಲಿ ಸಾಧಿಸಬಹುದಾದದ್ದನ್ನೆಲ್ಲ ಸಾಧಿಸಿದ ಬಳಿಕ ರಾಜಕೀಯದತ್ತ ಮುಖ ಮಾಡಿದ ಇಮ್ರಾನ್ ಖಾನ್ 1996ರಲ್ಲಿ ಪಿಟಿಐ ಪಕ್ಷವನ್ನು ಸ್ಥಾಪಿಸಿದರು. ಆಗ ರಾಜಕೀಯದಲ್ಲೇನೂ ಅಲ್ಲೋಲ ಕಲ್ಲೋಲ ಆಗಲಿಲ್ಲ. ಏಕೆಂದರೆ ಕ್ರಿಕೆಟ್‌ನಲ್ಲಿ ಇಮ್ರಾನ್‌ರನ್ನು ತಲೆ ಮೇಲೆ ಹೊತ್ತು ಮೆರೆದ ಅದೇ ಜನ ರಾಜಕೀಯದಲ್ಲಿ ಅವರಿಗೆ ಭವಿಷ್ಯವಿಲ್ಲ ಎಂದೇ ಭಾವಿಸಿದ್ದರು. 2002ರಲ್ಲಿ ಅಲ್ಲಿನ ಸಂಸತ್ತಿಗೆ ಚುನಾವಣೆ ನಡೆದಾಗ ಇಮ್ರಾನ್ ಖಾನ್ ಅವರ ಪಕ್ಷ ಗೆದ್ದದ್ದು ಕೇವಲ ಒಂದು ಸ್ಥಾನ! 2008ರಲ್ಲಿ ಇಮ್ರಾನ್ ಖಾನ್ ಅವರೇ ಚುನಾವಣೆಯನ್ನು ಬಹಿಷ್ಕರಿಸಿದ್ದರು. ಹಾಗಾಗಿ ಅವರ ಪಕ್ಷ ಸೀಟು ಗೆಲ್ಲುವ ಪ್ರಶ್ನೆಯೇ ಬರಲಿಲ್ಲ.



2011ರ ವೇಳೆಗೆ ಇಮ್ರಾನ್ ಖಾನ್ ಅವರ ಪಕ್ಷ ಸಾಕಷ್ಟು ಜನಪ್ರಿಯತೆಯನ್ನು ಗಳಿಸಿತು. ಮುಖ್ಯವಾಗಿ ನಗರ ಪ್ರದೇಶಗಳಲ್ಲಿ ಇಮ್ರಾನ್ ಅವರ ಅಮೆರಿಕ ವಿರೋಧಿ ಮತ್ತು ಭ್ರಷ್ಟಾಚಾರ ವಿರೋಧಿ ಧೋರಣೆಗಳಿಗೆ ಜನಮನ್ನಣೆ ಲಭಿಸಿತು. ಅಷ್ಟಾಗಿಯೂ 2013ರ ಮಹಾಚುನಾವಣೆಯಲ್ಲಿ ಅವರ ಪಕ್ಷಕ್ಕೆ 342 ರಲ್ಲಿ 33 ಸ್ಥಾನ ಗೆಲ್ಲಲಷ್ಟೇ ಸಾಧ್ಯವಾಯಿತು.

ರಾಜಕಾರಣಿಯಾಗಿ ಇಮ್ರಾನ್ ಖಾನ್ ಅವರ ಸಂಸದೀಯ ಸಾಧನೆ ಅಷ್ಟಕ್ಕಷ್ಟೆ. ಆದರೆ ಅವರ ಭ್ರಷ್ಟಾಚಾರ ವಿರೋಧಿ ಧೋರಣೆಯನ್ನು ಮೆಚ್ಚಿಕೊಳ್ಳದವರಿಲ್ಲ. ಜತೆಗೆ ಕ್ಯಾನ್ಸರ್ ಆಸ್ಪತ್ರೆ ಸಹಿತ ಹಲವು ಜನೋಪಯೋಗಿ ಯೋಜನೆಗಳನ್ನು ಜಾರಿಗೆ ತಂದಿರುವ ಕೀರ್ತಿಯೂ ಇದೆ. ಅಷ್ಟರ ಮಧ್ಯೆಯೂ ಕೆಲವರು 'ಈತನಿಗೆ ವಿದೇಶಗಳಿಂದ ಹಣ ಬರುತ್ತದೆ, ವಿದೇಶಗಳಲ್ಲಿ ಅಪಾರ ಆಸ್ತಿ ಮಾಡಿದ್ದಾರೆ' ಎಂದು ಕೋರ್ಟಿನಲ್ಲಿ ಮೊಕದ್ದಮೆ ಹೂಡಿದ್ದಾರೆ. 'ನಾನು ಕ್ರಿಕೆಟ್‌ನಲ್ಲಿ ಅಪಾರ ಹಣ ದುಡಿದದ್ದು ಇಡೀ ಜಗತ್ತಿಗೇ ಗೊತ್ತಿದೆ. ನನ್ನ ಎಲ್ಲ ಹಣದ ಲೆಕ್ಕಾಚಾರವನ್ನೂ ಕೋರ್ಟಿಗೆ ಕೊಟ್ಟಿದ್ದೇನೆ. ಇದೆಲ್ಲ ನನಗಾಗದ ರಾಜಕಾರಣಿಗಳ ಪಿತೂರಿ' ಎನ್ನುವುದು ಇಮ್ರಾನ್ ಹೇಳಿಕೆ.

ಪಿತೂರಿಯೋ ನಿಜವೋ ಗೊತ್ತಿಲ್ಲ, ನವಾಜ್ ಷರೀಫ್ ವಿರುದ್ಧ ಕೋರ್ಟ್ ತೀರ್ಪು ಬಂದ ಮರುದಿನವೇ ಪಾಕಿಸ್ತಾನ ಸಂಸತ್ತಿನ ಇನ್ನೊಬ್ಬ ಸದಸ್ಯೆ ಆಯಿಷಾ ಗುಲಾಲಾಯಿ ಅವರು ಇಮ್ರಾನ್ ವಿರುದ್ಧ ಕಿರುಕುಳದ ಆರೋಪ ಮಾಡಿದ್ದಾರೆ. 'ನನಗೆ ಇಮ್ರಾನ್ ಖಾನ್ ಅನುಚಿತ ಮೆಸೇಜ್‌ಗಳನ್ನು ಕಳಿಸಿದ್ದಾರೆ' ಎನ್ನುವುದು ಅವರ ಆರೋಪ. 'ಈ ಆರೋಪಗಳ ಬಗ್ಗೆ ಸಂಸದೀಯ ಸಮಿತಿಯಿಂದ ತನಿಖೆ ಮಾಡಿಸುವುದಾಗಿ' ಈಗಿನ ಪ್ರಧಾನಿ ಶಾಹಿದ್ ಅಬ್ಬಾಸಿ ಹೇಳಿದ್ದಾರೆ. ಆಯಿಷಾ ಇತ್ತೀಚಿನವರೆಗೂ ಇಮ್ರಾನ್ ಖಾನ್‌ರ ಪಿಟಿಐ ಪಕ್ಷದಲ್ಲೇ ಇದ್ದರು. ಕಳೆದ ತಿಂಗಳು ರಾಜೀನಾಮೆ ನೀಡಿದ್ದಾರೆ.

'ಸುರಸುಂದರಾಂಗ' ಎಂದೇ ಖ್ಯಾತಿ ಹೊಂದಿರುವ ಇಮ್ರಾನ್ ಖಾನ್ ಸುತ್ತ ಪ್ರೇಮಕಥೆಗಳೂ ಧಂಡಿಯಾಗಿವೆ. ಲಂಡನ್ನಿನ ಜೆನಿಮಾಳನ್ನು ಮದುವೆಯಾಗಿ ಆಕೆಯಿಂದ ಇಬ್ಬರು ಮಕ್ಕಳನ್ನು ಪಡೆದ ಬಳಿಕ ತಲಾಖ್ ನೀಡಿದರು. ಬಳಿಕ ಬ್ರಿಟಿಷ್ ಟಿವಿ ಯ ಪತ್ರಕರ್ತೆ ರೆಹಂ ಖಾನ್ ಜತೆಗೆ ಮದುವೆಯಾದರೂ 10 ತಿಂಗಳ ಬಳಿಕ ಅದು ಮುರಿದುಬಿತ್ತು. ಇದೀಗ ಆಧ್ಯಾತ್ಮಿಕ ಗುರು ಬುಶ್ರಾ ಎಂಬಾಕೆಯ ತಂಗಿ ಮರಿಯಂ ಜತೆಗೆ ಮೂರನೇ ಮದುವೆ ಎಂಬ ಸುದ್ದಿ ಹಬ್ಬಿದೆ. 'ಮದುವೆ ಆಗಬೇಕು, ಆದರೆ 2018ರವರೆಗೂ ಇಲ್ಲ' ಎನ್ನುವುದು ಇಮ್ರಾನ್ ಸಮಜಾಯಿಷಿ.

ಈ ಮಧ್ಯೆ ಪಾಕಿಸ್ತಾನ ಸೂಪರ್ ಲೀಗ್ ನಲ್ಲಿ ಆಡಲು ಬಂದಿರುವ ವಿದೇಶಿ ಆಟಗಾರರನ್ನು 'ಫಟೀಚರ್' ಎಂದು ಕರೆದದ್ದೂ ಇಮ್ರಾನ್ ಸುತ್ತ ವಿವಾದದ ಬೇಲಿ ಹಬ್ಬಿಸಿದೆ. 'ನಾನು ಆ ಶಬ್ದವನ್ನು ಕ್ರಿಕೆಟ್ ಪರಿಭಾಷೆಯಲ್ಲಿ ಬಳಸಿದ್ದೇನೆ. ಕ್ರಿಕೆಟ್‌ನಲ್ಲಿ 12ನೇ ಆಟಗಾರ ಹೇಗೆ ಹೆಸರಿಗೆ ಮಾತ್ರ ಇರುತ್ತಾನೋ ಹಾಗೆಯೇ ಸೂಪರ್ ಲೀಗ್‌ನಲ್ಲಿ ಈ ವಿದೇಶೀ ಆಟಗಾರರು' ಎಂದಿದ್ದಾರೆ ಇಮ್ರಾನ್.

Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65